ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/

ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number (CIN): U40109KA1999SGC025521**

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

---

**ಸಂಖ್ಯೆ: ಕವಿಪ್ರನಿನಿ/ಬಿ16/86466/2018-19** **ದಿನಾಂಕ: 25.01.2022**

## ಸುತ್ತೋಲೆ

**ವಿಷಯ:** ನಿಗಮದ ಅಧಿಕಾರಿ/ನೌಕರರಿಗೆ ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮಂಜೂರು ಮಾಡಿದಾಗ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**
1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/86466/2018-19 ದಿನಾಂಕ: 06.06.2019
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/86466/2018-19 ದಿನಾಂಕ: 03.08.2019.
3. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು ರವರ ದಿನಾಂಕ: 06.02.2021 ರ ಪತ್ರ ಸಂಖ್ಯೆ: ಮುಇಂ(ವಿ)/ಲೆನಿ/ಸಲೆಅ/ಹಿಸ/ಸ-1/2020-21/10211.
4. ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮ.ಸಂ), ಚಾವಿಸನಿನಿ, ನಿಗಮ ಕಚೇರಿ, ಮೈಸೂರು ರವರ ದಿನಾಂಕ: 09.03.2021 ರ ಪತ್ರ ಸಂಖ್ಯೆ: ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿಸ-2/20-21/24069.

***

ನಿಗಮದ ನಿಯಮಾನುಸಾರ ಮುಂದಿನ ಹುದ್ದೆಯ ಬಡ್ತಿಗೆ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿಗೆ ಅರ್ಹರಿದ್ದು, ಹುದ್ದೆಗಳ ಅಲಭ್ಯತೆಯಿಂದ ಪದೋನ್ನತಿ ಬಾರದೇ, ಒಂದೇ ಹುದ್ದೆಯಲ್ಲಿ 10 ವರ್ಷಗಳ ಸೇವೆ ಪೂರೈಸಿರುವ ಹಾಗೂ ಮುಂದಿನ ಹುದ್ದೆಯ ಪದೋನ್ನತಿಗೆ ಅವಕಾಶವಿಲ್ಲದ ಅಥವಾ ಮುಂದಿನ ಹುದ್ದೆಯ ಬಡ್ತಿಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದದೇ, ಒಂದೇ ಹುದ್ದೆಯಲ್ಲಿ 14 ವರ್ಷಗಳ ಸೇವೆ ಪೂರೈಸಿರುವುದಕ್ಕಾಗಿ ನಿಗಮದ ಅಧಿಕಾರಿ/ನೌಕರರಿಗೆ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು (ಎನ್.ಹೆಚ್.ಎಸ್) ಮಂಜೂರು ಮಾಡಲು ಮಂಡಳಿಯ ಆದೇಶ ಸಂಖ್ಯೆ: ಕವಿಮಂ/ಬಿ16/5816/82-83 ದಿನಾಂಕ: 24.06.1982 ರಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಪ್ರಸ್ತುತ, ನಿಗಮದ ಅಧಿಕಾರಿ/ನೌಕರರಿಗೆ ವಾರ್ಷಿಕ ವೇತನ ಬಡ್ತಿಯನ್ನು ಜನವರಿ ಅಥವಾ ಜುಲೈ ತಿಂಗಳಿನಲ್ಲಿ ಮಂಜೂರು ಮಾಡುತ್ತಿದ್ದು, ಅಧಿಕಾರಿ/ನೌಕರರು 10 ಅಥವಾ 14 ವರ್ಷಗಳು ಪೂರ್ಣಗೊಳ್ಳುವ ದಿನಾಂಕದಿಂದ ಅನ್ವಯವಾಗುವಂತೆ ಮುಂದಿನ ಉನ್ನತ ವೇತನ ಶ್ರೇಣಿಯ ಸೌಲಭ್ಯವನ್ನು ಮಂಜೂರು ಮಾಡುವಂತೆ ಕೋರಿ ಇಚ್ಛಿತಾ ಪತ್ರಗಳನ್ನು ನೀಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಈ ಹಿಂದೆ ಮಂಜೂರು ಮಾಡುತ್ತಿದ್ದ ತಿಂಗಳಿಗೆ ನೀಡಬೇಕೆ? ಅಥವಾ ಮುಂದಿನ ಉನ್ನತ ವೇತನ ಶ್ರೇಣಿಯ ಸೌಲಭ್ಯವನ್ನು, ವಾರ್ಷಿಕ ವೇತನ ಬಡ್ತಿಯ ತಿಂಗಳಿಗೆ ಮುಂದೂಡಿ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮಂಜೂರು ಮಾಡಬೇಕೆ? ಎಂಬುದರ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಉಲ್ಲೇಖ 3 ಹಾಗೂ 4 ರ ಪತ್ರಗಳಲ್ಲಿ ಕೋರಲಾಗಿರುತ್ತದೆ.

ವಿವಿಧ ದಿನಾಂಕಗಳಂದು ನಿಯತಗೊಳ್ಳುತ್ತಿರುವ ನಿಗಮದ ನೌಕರರು/ಅಧಿಕಾರಿಗಳ ವಾರ್ಷಿಕ ವೇತನ ಬಡ್ತಿಯ ದಿನಾಂಕಗಳ ಬದಲಾಗಿ ಸಂದರ್ಭಾನುಸಾರ ಪ್ರತಿ ವರ್ಷದ ಒಂದನೇ ಜನವರಿ ಅಥವಾ ಒಂದನೇ ಜುಲೈ ದಿನಾಂಕದಂದು ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಿ ನಿಯತಗೊಳಿಸಲು ನಿಗಮದ ದಿನಾಂಕ: 06.06.2019 ಆದೇಶದಲ್ಲಿ ತಿಳಿಸಲಾಗಿರುತ್ತದೆ.

ನಿಗಮದ ಅಧಿಕಾರಿ/ನೌಕರರಿಗೆ ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮಂಜೂರು ಮಾಡಿದಾಗ ವಾರ್ಷಿಕ ವೇತನ ಬಡ್ತಿಯನ್ನು ಈ ಕೆಳಗೆ ತಿಳಿಸಿರುವ ಉದಾಹರಣೆಗಳಂತೆ ಮಂಜೂರು ಮಾಡಬಹುದಾಗಿರುತ್ತದೆ.

**ಉದಾಹರಣೆ: 1**

| | |
|---|---|
| **ನೇಮಕ ಹೊಂದಿದ ಹುದ್ದೆ ಮತ್ತು ದಿನಾಂಕ:** | ಕಿರಿಯ ಸಹಾಯಕ<br>ದಿನಾಂಕ: 08.09.2000 |
| **ವರ್ಗಾವಣೆ ಮೂಲಕ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ನೇಮಕಾತಿ ಮತ್ತು ದಿನಾಂಕ:** | ಕಿರಿಯ ಇಂಜಿನಿಯರ್(ವಿ)<br>ದಿನಾಂಕ: 30.10.2006 |
| **ಸಹಾಯಕ ಇಂಜಿನಿಯರ್(ವಿ) ಹುದ್ದೆಗೆ ಪದೋನ್ನತಿ** | ದಿನಾಂಕ: 17.02.2011 |
| **ವೇತನ ಶ್ರೇಣಿ:** | ರೂ.41130-1140-42270-1270-46080-1390-51640-1560-56320-1700-63120-1900-68820-2050-72920 |
| **ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮುಂದೂಡಿರುವ ಬಗ್ಗೆ:** | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ವಾರ್ಷಿಕ ವೇತನ ಬಡ್ತಿ ದಿನಾಂಕಕ್ಕೆ ಮುಂದೂಡಿ ಇಚ್ಛಿತಾ ಪತ್ರವನ್ನು ಸಲ್ಲಿಸಿರುವುದಿಲ್ಲ. |

| ದಿನಾಂಕ | ವೇತನ | ವೇತನ ಶ್ರೇಣಿ |
|---|---|---|
| 01.07.2020 | ರೂ.56,320/- | ವಾರ್ಷಿಕ ವೇತನ ಬಡ್ತಿ<br>ಸಹಾಯಕ ಇಂಜಿನಿಯರ್(ವಿ) ಹುದ್ದೆಯ ವೇತನ ಶ್ರೇಣಿ: ರೂ.41130-72920 ರಲ್ಲಿ |
| 17.02.2021 | ರೂ.58,020/- | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುದ್ದೆಯ ವೇತನ ಶ್ರೇಣಿ: ರೂ.46080-98030 ರಲ್ಲಿ |
| 01.01.2022 | ರೂ.59,720/- | ಮುಂದಿನ ವಾರ್ಷಿಕ ವೇತನ ಬಡ್ತಿ<br>ವೇತನ ಶ್ರೇಣಿ: ರೂ.46080-98030 ರಲ್ಲಿ<br>(ದಿನಾಂಕ: 16.02.2022 ಕ್ಕೆ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮಂಜೂರು ಮಾಡಿ ಒಂದು ವರ್ಷ ಮುಕ್ತಾಯಗೊಳ್ಳುತ್ತದೆ. ಆದ್ದರಿಂದ ಜನವರಿಯಲ್ಲಿ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವುದು.) |

**ಉದಾಹರಣೆ: 2**

| | |
|---|---|
| **ನೇಮಕ ಹೊಂದಿದ ಹುದ್ದೆ ಮತ್ತು ದಿನಾಂಕ:** | ಕಿರಿಯ ಸಹಾಯಕ<br>ದಿನಾಂಕ: 08.09.2000 |
| **ವರ್ಗಾವಣೆ ಮೂಲಕ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ನೇಮಕಾತಿ ಮತ್ತು ದಿನಾಂಕ:** | ಕಿರಿಯ ಇಂಜಿನಿಯರ್(ವಿ)<br>ದಿನಾಂಕ: 30.10.2006 |
| **ಸಹಾಯಕ ಇಂಜಿನಿಯರ್(ವಿ) ಹುದ್ದೆಗೆ ಪದೋನ್ನತಿ:** | ದಿನಾಂಕ: 17.02.2011 |
| **ವೇತನ ಶ್ರೇಣಿ:** | ರೂ.41130-1140-42270-1270-46080-1390-51640-1560-56320-1700-63120-1900-68820-2050-72920 |
| **ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮುಂದೂಡಿರುವ ಬಗ್ಗೆ:** | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ವಾರ್ಷಿಕ ವೇತನ ಬಡ್ತಿ ದಿನಾಂಕಕ್ಕೆ ಮುಂದೂಡಿ ಇಚ್ಛಿತಾ ಪತ್ರವನ್ನು ಸಲ್ಲಿಸಿರುತ್ತಾರೆ. |

| ದಿನಾಂಕ | ವೇತನ | ವೇತನ ಶ್ರೇಣಿ |
|---|---|---|
| 01.07.2020 | ರೂ.56,320/- | ವಾರ್ಷಿಕ ವೇತನ ಬಡ್ತಿ<br>ಸಹಾಯಕ ಇಂಜಿನಿಯರ್(ವಿ) ಹುದ್ದೆಯ ವೇತನ ಶ್ರೇಣಿ: ರೂ.41130-72920 ರಲ್ಲಿ |
| 01.07.2021 | ರೂ.58,020/- | ವಾರ್ಷಿಕ ವೇತನ ಬಡ್ತಿ<br>ಸಹಾಯಕ ಇಂಜಿನಿಯರ್(ವಿ) ಹುದ್ದೆಯ ವೇತನ ಶ್ರೇಣಿ: ರೂ.41130-72920 ರಲ್ಲಿ |
| 01.07.2021 | ರೂ.59,720/- | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುದ್ದೆಯ ವೇತನ ಶ್ರೇಣಿ: ರೂ.46080-98030 ರಲ್ಲಿ |
| 01.07.2022 | ರೂ.61,420/- | ಮುಂದಿನ ವಾರ್ಷಿಕ ವೇತನ ಬಡ್ತಿ<br>ವೇತನ ಶ್ರೇಣಿ: ರೂ.46080-98030 ರಲ್ಲಿ |

**ಉದಾಹರಣೆ: 3**

| | |
|---|---|
| **ನೇಮಕ ಹೊಂದಿದ ಹುದ್ದೆ:** | ಸಹಾಯಕ |
| **ನೇಮಕಗೊಂಡ ದಿನಾಂಕ:** | 10.10.2011 |
| **ವೇತನ ಶ್ರೇಣಿ:** | ರೂ.22920-670-26270-810-31130-940-37710-1140-42270-1270-46080-1390-51640-1560-56320. |
| **ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮುಂದೂಡಿರುವ ಬಗ್ಗೆ:** | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ವಾರ್ಷಿಕ ವೇತನ ಬಡ್ತಿ ದಿನಾಂಕಕ್ಕೆ ಮುಂದೂಡಿ ಇಚ್ಛಿತಾ ಪತ್ರವನ್ನು ಸಲ್ಲಿಸಿರುವುದಿಲ್ಲ. |

| ದಿನಾಂಕ | ವೇತನ | ವೇತನ ಶ್ರೇಣಿ |
|---|---|---|
| 01.07.2021 | ರೂ.31,130/- | ವಾರ್ಷಿಕ ವೇತನ ಬಡ್ತಿ<br>ಸಹಾಯಕ ಹುದ್ದೆಯ ವೇತನ ಶ್ರೇಣಿ: ರೂ.22920-56320 ರಲ್ಲಿ |
| 10.10.2021 | ರೂ.32,070/- | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಹಿರಿಯ ಸಹಾಯಕ ಹುದ್ದೆಯ ವೇತನ ಶ್ರೇಣಿ: ರೂ.26270-65020 ರಲ್ಲಿ ಮಂಜೂರು. |
| 01.07.2022 | ರೂ.33,010/- | ಮುಂದಿನ ವಾರ್ಷಿಕ ವೇತನ ಬಡ್ತಿ<br>ವೇತನ ಶ್ರೇಣಿ: ರೂ.26270-65020. |

**ಉದಾಹರಣೆ: 4**

| | |
|---|---|
| **ನೇಮಕ ಹೊಂದಿದ ಹುದ್ದೆ:** | ಕಿರಿಯ ಇಂಜಿನಿಯರ್(ವಿ) |
| **ನೇಮಕಗೊಂಡ ದಿನಾಂಕ:** | 10.03.2011 |
| **ವಾರ್ಷಿಕ ವೇತನ ಬಡ್ತಿ ತಿಂಗಳು** | ಜುಲೈ (ನೌಕರನ ಅನಧಿಕೃತ ಗೈರುಹಾಜರಾತಿಯಿಂದ ವಾರ್ಷಿಕ ವೇತನ ಬಡ್ತಿಯನ್ನು ಜುಲೈನಲ್ಲಿ ಮಂಜೂರು ಮಾಡಲಾಗಿದೆ) |
| **ವೇತನ ಶ್ರೇಣಿ:** | ರೂ.26270-810-31130-940-37710-1140-42270-1270-46080-1390-51640-1560-56320-1700-63120-1900-65020 |
| **ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮುಂದೂಡಿರುವ ಬಗ್ಗೆ:** | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ವಾರ್ಷಿಕ ವೇತನ ಬಡ್ತಿ ದಿನಾಂಕಕ್ಕೆ ಮುಂದೂಡಿ ಇಚ್ಛಿತಾ ಪತ್ರವನ್ನು ಸಲ್ಲಿಸಿರುವುದಿಲ್ಲ. |

| ದಿನಾಂಕ | ವೇತನ | ವೇತನ ಶ್ರೇಣಿ |
|---|---|---|
| 01.07.2020 | ರೂ.34,890/- | ವಾರ್ಷಿಕ ವೇತನ ಬಡ್ತಿ<br>ಕಿರಿಯ ಇಂಜಿನಿಯರ್(ವಿ) ಹುದ್ದೆಯ ವೇತನ ಶ್ರೇಣಿ: ರೂ. 26270-65020 ರಲ್ಲಿ |
| 10.03.2021 | ರೂ.41,130/- | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಸಹಾಯಕ ಇಂಜಿನಿಯರ್(ವಿ) ಹುದ್ದೆಯ ವೇತನ ಶ್ರೇಣಿ: ರೂ.41130-72920 ರಲ್ಲಿ ಮಂಜೂರು. |
| 01.01.2022 | ರೂ.42,270/- | ಮುಂದಿನ ವಾರ್ಷಿಕ ವೇತನ ಬಡ್ತಿ<br>ವೇತನ ಶ್ರೇಣಿ: ರೂ.ರೂ.41130-72920. |

**ಉದಾಹರಣೆ: 5**

| | |
|---|---|
| **ನೇಮಕ ಹೊಂದಿದ ಹುದ್ದೆ:** | ಸಹಾಯಕ |
| **ನೇಮಕಗೊಂಡ ದಿನಾಂಕ:** | 10.10.2011 |
| **ವೇತನ ಶ್ರೇಣಿ:** | ರೂ.22920-670-26270-810-31130-940-37710-1140-42270-1270-46080-1390-51640-1560-56320. |
| **ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಮುಂದೂಡಿರುವ ಬಗ್ಗೆ:** | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ವಾರ್ಷಿಕ ವೇತನ ಬಡ್ತಿ ದಿನಾಂಕಕ್ಕೆ ಮುಂದೂಡಿ ಇಚ್ಛಿತಾ ಪತ್ರವನ್ನು ಸಲ್ಲಿಸಿರುತ್ತಾರೆ. |

| ದಿನಾಂಕ | ವೇತನ | ವೇತನ ಶ್ರೇಣಿ |
|---|---|---|
| 01.07.2021 | ರೂ.31,130/– | ವಾರ್ಷಿಕ ವೇತನ ಬಡ್ತಿ<br>ಸಹಾಯಕ ಹುದ್ದೆಯ ವೇತನ ಶ್ರೇಣಿ: ರೂ.22920–56320 ರಲ್ಲಿ |
| 01.07.2022 | ರೂ.32,070/– | ವಾರ್ಷಿಕ ವೇತನ ಬಡ್ತಿ |
| 01.07.2022 | ರೂ.33,010/– | ಮುಂದಿನ ಉನ್ನತ ವೇತನ ಶ್ರೇಣಿ ಸೌಲಭ್ಯವನ್ನು ಹಿರಿಯ ಸಹಾಯಕ ಹುದ್ದೆಯ ವೇತನ ಶ್ರೇಣಿ: ರೂ.26270–65020 ರಲ್ಲಿ ಮಂಜೂರು. |
| 01.07.2023 | ರೂ.33,950/– | ಮುಂದಿನ ವಾರ್ಷಿಕ ವೇತನ ಬಡ್ತಿ<br>ವೇತನ ಶ್ರೇಣಿ: ರೂ.26270–65020. |

ನಿರ್ದೇಶಕರು
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಗೆ:**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

   https://kptcl.karnataka.gov.in/ for information of:

6. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:–**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿಭವನ, ಬೆಂಗಳೂರು.